# ಸಮಾಜ ಕಲ್ಯಾಣ ಇಲಾಖೆ

**ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ-2013 ರ ಪ್ರಕಾರ ದಿನಾಂಕ: 16-09-2019 ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳ/ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ ಸಭೆಯ ನಡವಳಿಗಳು:**

**ಸ್ಥಳ: ಕೊಠಡಿ ಸಂಖ್ಯೆ:334, 3ನೇ ಮಹಡಿ, ಸಮ್ಮೇಳನ ಸಭಾಂಗಣ, ವಿಧಾನಸೌಧ, ಬೆಂಗಳೂರು**

**ಸಭೆಗೆ ಹಾಜರಾದ ಸದಸ್ಯರುಗಳ ಮತ್ತು ಅಧಿಕಾರಿಗಳ ವಿವರ:-**

| | | |
|---|---|---|
| 1 | ಶ್ರೀ. ಬಿ.ಎಸ್.ಯಡಿಯೂರಪ್ಪ .<br>ಸನ್ಮಾನ್ಯ ಮುಖ್ಯಮಂತ್ರಿಗಳು. | ಅಧ್ಯಕ್ಷರು |
| 2 | ಶ್ರೀ ಗೋವಿಂದ ಎಂ ಕಾರಜೋಳ.<br>ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು. | ಉಪಾಧ್ಯಕ್ಷರು |
| 3 | ಡಾ.ಅಶ್ವಥ್ ನಾರಾಯಣ್ ಸಿ.ಎನ್.,<br>ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಐ.ಟಿ & ಬಿ.ಟಿ ಮತ್ತು ವಿಜ್ಞಾನ & ತಂತ್ರಜ್ಞಾನ ಸಚಿವರು | ಸದಸ್ಯರು |
| 4 | ಶ್ರೀ. ಕೆ.ಎಸ್.ಈಶ್ವರಪ್ಪ,<br>ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು | ಸದಸ್ಯರು |
| 5 | ಶ್ರೀ. ಜೆ.ಸಿ.ಮಾಧುಸ್ವಾಮಿ<br>ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು | ಸದಸ್ಯರು |
| 6 | ಶ್ರೀ. ಬಸವರಾಜ ಬೊಮ್ಮಾಯಿ<br>ಮಾನ್ಯ ಗೃಹ ಸಚಿವರು | ವಿಶೇಷ ಆಹ್ವಾನಿತರು |
| 7 | ಡಾ.ಉಮೇಶ ಜಿ. ಜಾಧವ್.<br>ಮಾನ್ಯ ಲೋಕಸಭಾ ಸದಸ್ಯರು, ಕಲಬುರಗಿ | ಸದಸ್ಯರು |
| 8 | ಶ್ರೀ. ಐಹೊಳೆ ದುರ್ಯೋಧನ<br>ಮಾನ್ಯ ಶಾಸಕರು, ರಾಯಭಾಗ ವಿಧಾನ ಸಭಾ ಕ್ಷೇತ್ರ | ಸದಸ್ಯರು |
| 9 | ಶ್ರೀ. ನರಸಿಂಹ ನಾಯಕ್ (ರಾಜುಗೌಡ)<br>ಮಾನ್ಯ ಶಾಸಕರು, ಸುರಪುರ ವಿಧಾನಸಭಾ ಕ್ಷೇತ್ರ | ಸದಸ್ಯರು |
| 10 | ಶ್ರೀ. ಎಸ್.ರಘು<br>ಮಾನ್ಯ ಶಾಸಕರು, ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರ | ಸದಸ್ಯರು |
| 11 | ಶ್ರೀ. ಎನ್. ಮಹೇಶ್<br>ಮಾನ್ಯ ಶಾಸಕರು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ | ಸದಸ್ಯರು |
| 12 | ಶ್ರೀ. ಟಿ.ಎಂ.ವಿಜಯ ಭಾಸ್ಕರ , ಭಾ.ಆ.ಸೇ<br>ಸರ್ಕಾರದ ಮುಖ್ಯ ಕಾರ್ಯದರ್ಶಿ | ಸದಸ್ಯರು |
| 13 | ಶ್ರೀಮತಿ. ವಂದಿತಾ ಶರ್ಮ, ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು. | ಸದಸ್ಯರು |

| | | |
|---|---|---|
| 14 | ಶ್ರೀ. ಐ.ಎಸ್.ಎನ್. ಪ್ರಸಾದ್. ಭಾ.ಆ.ಸೇ<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ. ಆರ್ಥಿಕ ಇಲಾಖೆ. | ಸದಸ್ಯರು |
| 15 | ಶ್ರೀ. ಜಿ. ಕುಮಾರ ನಾಯಕ್. ಭಾ.ಆ.ಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿ. ಸಮಾಜ ಕಲ್ಯಾಣ ಇಲಾಖೆ. | ಸದಸ್ಯ ಕಾರ್ಯದರ್ಶಿ |
| 16 | ಡಾ: ಇ. ವೆಂಕಟಯ್ಯ. ಭಾ.ಆ.ಸೇ (ನಿ) | ನೋಡಲ್ ಏಜೆನ್ಸಿ ಸಲಹೆಗಾರರು. |
| 17 | ಉಪ ಯೋಜನೆಗಳನ್ನು ಅನುಷ್ಠಾನ ಮಾಡುತ್ತಿರುವ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು. ಪ್ರಧಾನ ಕಾರ್ಯದರ್ಶಿಗಳು. ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು | ವಿಶೇಷ ಆಹ್ವಾನಿತರು |

ಪ್ರಾರಂಭದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ. ಸಮಾಜ ಕಲ್ಯಾಣ ಇಲಾಖೆ ಇವರು ರಾಜ್ಯ ಪರಿಷತ್ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳು. ಮಾನ್ಯ ಉಪ ಮುಖ್ಯಮಂತ್ರಿಗಳು. ಉಪಾಧ್ಯಕ್ಷರಾದ ಮಾನ್ಯ ಸಮಾಜ ಕಲ್ಯಾಣ ಸಚಿವರು. ರಾಜ್ಯ ಪರಿಷತ್ತಿನ ಎಲ್ಲಾ ನಾಮನಿರ್ದೇಶಿತ ಮಾನ್ಯ ಸದಸ್ಯರುಗಳು. ವಿಶೇಷ ಆಹ್ವಾನಿತರಾದ ಮಾನ್ಯ ಗೃಹ ಸಚಿವರು ಹಾಗೂ ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು. ಪ್ರಧಾನ ಕಾರ್ಯದರ್ಶಿಗಳು. ಕಾರ್ಯದರ್ಶಿಗಳು ಮತ್ತು ಸಭೆಗೆ ಹಾಜರಾದ ಎಲ್ಲಾ ಇಲಾಖಾ ಮುಖ್ಯಸ್ಥರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ನಡೆಸಲು ಅನುಮತಿ ಕೋರಿದರು.

ಮುಂದುವರೆದು ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:13-09-2019 ರಂದು ನೋಡಲ್ ಏಜೆನ್ಸಿ ಸಭೆಯನ್ನು ಏರ್ಪಡಿಸಿದ್ದು. ಸದರಿ ಸಭೆಯಲ್ಲಿ ವಿವಿಧ ಇಲಾಖೆಗಳಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಶೀಲಿಸಿದ್ದು. ಆಗಸ್ಟ್ 2019 ರ ಅಂತ್ಯಕ್ಕೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳಡಿ ಶೇ.18 ರಷ್ಟು ಪ್ರಗತಿ ಸಾಧಿಸಿರುವುದನ್ನು ಸಭೆಯ ಅವಗಾಹನೆಗೆ ತರಲಾಯಿತು.

**2018-19 ಮತ್ತು 2019-20 ನೇ ಸಾಲಿನ ಆಗಸ್ಟ್ ಅಂತ್ಯಕ್ಕೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯ ಪ್ರಗತಿಯ ತುಲನಾತ್ಮಕ ವಿವರ**

(ರೂ.ಕೋಟಿಗಳಲ್ಲಿ)

| ವರ್ಷ | ಎಸ್.ಸಿ.ಎಸ್.ಪಿ | | | ಟಿ.ಎಸ್.ಪಿ | | | ಒಟ್ಟು | | |
|---|---|---|---|---|---|---|---|---|---|
| | ಹಂಚಿಕೆ | ವೆಚ್ಚ | ಶೇ | ಹಂಚಿಕೆ | ವೆಚ್ಚ | ಶೇ | ಹಂಚಿಕೆ | ವೆಚ್ಚ | ಶೇ |
| 2018-19 | 20940.79 | 2311.84 | 11 | 8750.71 | 863.01 | 10 | 29691.50 | 3174.85 | 11 |
| 2019-20 | 21602.62 | 3704.99 | 17 | 8842.06 | 1783.29 | 20 | 30444.68 | 5488.28 | 18 |

**2019-20 ನೇ ಸಾಲಿನಲ್ಲಿ ಆಗಸ್ಟ್ 2019 ರ ಅಂತ್ಯಕ್ಕೆ ಇಲಾಖಾವಾರು ಸಾಧಿಸಿರುವ ಪ್ರಗತಿ ವಿವರ**

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಇಲಾಖೆಗಳು | SCSP | | | TSP | | |
|---|---|---|---|---|---|---|---|
| | | ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1 | 2 | 3 | 4 | 5 | 6 | 7 | 8 |
| 1 | ಕೃಷಿ | 574.70 | 129.44 | 23 | 243.97 | 61.01 | 25 |
| 2 | ತೋಟಗಾರಿಕೆ | 133.53 | 8.50 | 6 | 53.14 | 3.19 | 6 |

| | | | | | | | |
|---|---|---|---|---|---|---|---|
| 3 | ರೇಷ್ಮೆ | 16.92 | 3.59 | 21 | 8.28 | 1.67 | 20 |
| 4 | ಪಶುಸಂಗೋಪನೆ | 162.50 | 12.39 | 8 | 91.59 | 6.83 | 7 |
| 5 | ಮೀನುಗಾರಿಕೆ | 3.64 | 0.57 | 16 | 1.07 | 0.10 | 9 |
| 6 | ಆರ್ಥಿಕ ಇಲಾಖೆ | 700.00 | 0.00 | 0 | 325.00 | 0.00 | 0 |
| 7 | ಸಾರಿಗೆ | 178.28 | 39.56 | 22 | 87.12 | 20.05 | 23 |
| 8 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 1831.44 | 152.05 | 8 | 811.55 | 120.79 | 15 |
| 9 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 5.64 | 0.75 | 13 | 2.34 | 0.32 | 14 |
| 10 | ಸಹಕಾರ | 564.87 | 15.40 | 3 | 412.00 | 21.43 | 5 |
| 11 | ಸಮಾಜ ಕಲ್ಯಾಣ | 4649.82 | 454.43 | 10 | 0.00 | 0.00 | 0 |
| 12 | ಪರಿಶಿಷ್ಟ ಪಂಗಡಗಳ ಕಲ್ಯಾಣ | 0.00 | 0.00 | 0 | 1389.18 | 349.15 | 25 |
| 13 | ಹಿಂದುಳಿದ ವರ್ಗಗಳ ಕಲ್ಯಾಣ | 115.27 | 12.40 | 11 | 63.05 | 7.24 | 11 |
| 14 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 990.73 | 131.43 | 13 | 408.72 | 45.13 | 11 |
| 15 | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ | 6.44 | 0.03 | 0 | 1.98 | 0.00 | 0 |
| 16 | ಪ್ರವಾಸೋದ್ಯಮ | 8.99 | 2.25 | 25 | 3.75 | 0.94 | 25 |
| 17 | ಯುವ ಸಬಲೀಕರಣ ಮತ್ತು ಕ್ರೀಡೆ | 13.18 | 2.80 | 21 | 12.09 | 1.62 | 13 |
| 18 | ಆಹಾರ ಮತ್ತು ನಾಗರಿಕ ಸರಬರಾಜು | 815.50 | 224.64 | 28 | 299.31 | 93.81 | 31 |
| 19 | ಕಂದಾಯ | 1917.97 | 422.25 | 22 | 793.17 | 174.62 | 22 |
| 20 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 3.00 | 0.75 | 25 | 1.00 | 0.25 | 25 |
| 21 | ವಸತಿ | 933.79 | 212.08 | 23 | 304.20 | 42.69 | 14 |
| 22 | ಉನ್ನತ ಶಿಕ್ಷಣ | 95.58 | 31.22 | 33 | 34.96 | 6.72 | 19 |
| 23 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | 786.69 | 182.08 | 23 | 315.06 | 59.79 | 19 |
| 24 | ಕೈಮಗ್ಗ ಮತ್ತು ಜವಳಿ | 52.19 | 10.14 | 19 | 21.29 | 4.15 | 19 |
| 25 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 1.08 | 0.00 | 0 | 0.20 | 0.00 | 0 |
| 26 | ಸಣ್ಣ ಪ್ರಮಾಣದ ಕೈಗಾರಿಕೆ | 55.69 | 0.00 | 0 | 19.17 | 0.00 | 0 |
| 27 | ಗಣಿ ಮತ್ತು ಭೂ ವಿಜ್ಞಾನ | 1.00 | 0.00 | 0 | 1.00 | 0.00 | 0 |
| 28 | ನಗರಾಭಿವೃದ್ಧಿ | 1061.00 | 95.55 | 9 | 403.97 | 36.60 | 9 |
| 29 | ಲೋಕೋಪಯೋಗಿ | 1303.61 | 104.55 | 8 | 566.00 | 40.64 | 7 |
| 30 | ಭಾರಿ ನೀರಾವರಿ | 1469.65 | 471.50 | 32 | 919.40 | 294.77 | 32 |
| 31 | ಸಣ್ಣ ನೀರಾವರಿ | 253.06 | 85.74 | 34 | 115.23 | 33.17 | 29 |
| 32 | ವೈದ್ಯಕೀಯ ಶಿಕ್ಷಣ | 36.42 | 6.64 | 18 | 13.36 | 2.93 | 22 |

| | | | | | | | |
|---|---|---|---|---|---|---|---|
| 33 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 671.29 | 150.94 | 22 | 290.97 | 64.75 | 22 |
| 34 | ಕಾರ್ಮಿಕ | 3.35 | 0.84 | 25 | 1.95 | 0.49 | 25 |
| 35 | ಕೌಶಲ್ಯ ಅಭಿವೃದ್ಧಿ | 105.37 | 1.75 | 2 | 43.95 | 0.88 | 2 |
| 36 | ಇಂಧನ | 1596.97 | 658.08 | 41 | 586.30 | 242.20 | 41 |
| 37 | ಕನ್ನಡ ಮತ್ತು ಸಂಸ್ಕೃತಿ | 20.42 | 1.09 | 5 | 8.73 | 0.30 | 3 |
| 38 | ಯೋಜನಾ ಮತ್ತು ಸಾಂಖ್ಯಿಕ | 462.60 | 113.36 | 25 | 188.11 | 45.06 | 24 |
| 39 | ಕಾನೂನು | 0.45 | 0.00 | 0 | 0.20 | 0.00 | 0 |
| | ಒಟ್ಟು | 21602.63 | 3738.79 | 17 | 8842.06 | 1783.29 | 20 |

ದಿನಾಂಕ:13-09-2019 ರಂದು ನಡೆದ ನೋಡಲ್ ಏಜೆನ್ಸಿ ಸಭೆಯಲ್ಲಿ ತೀರ್ಮಾನಿಸಿರುವಂತೆ ವಿವಿಧ ಇಲಾಖೆಗಳಲ್ಲಿ ಉಳಿಕೆಯಾಗಬಹುದಾದ ಮತ್ತು ಡೀಮ್ಡ್ ವೆಚ್ಚವಾಗುವ ಅನುದಾನವನ್ನು ಆದ್ಯತೆ ಮೇಲೆ ಪ್ರವಾಹ ಪೀಡಿತ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಉಪಯೋಗಿಸುವ ಬಗ್ಗೆ ರಾಜ್ಯ ಅಭಿವೃದ್ಧಿ ಪರಿಷತ್‌ನ ಅನುಮೋದನೆ ಕೋರಲಾಗಿದೆ. ಇಲಾಖಾವಾರು ಹಿಂಪಡೆಯಬಹುದಾದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಇಲಾಖೆ | ಕಾರ್ಯಕ್ರಮ | ಹಿಂಪಡೆಯುವ ಅನುದಾನ | | ಒಟ್ಟು |
|---|---|---|---|---|---|
| | | | ಎಸ್.ಸಿ.ಎಸ್.ಪಿ | ಟಿ.ಎಸ್.ಪಿ | |
| 1 | ಕೃಷಿ | ಇಸ್ರೇಲ್ ಮಾದರಿ ಕೃಷಿ ತಾಂತ್ರಿಕತೆ | 24.32 | 9.7.3 | 34.05 |
| 2 | ತೋಟಗಾರಿಕೆ | ಗುಚ್ಚಗಳ ಅಭಿವೃದ್ಧಿ | 22.50 | 9.00 | 31.50 |
| | | ಹಣ್ಣು ಬೆಳೆಗಳಿಗೆ ಸಹಾಯಧನ | 15.00 | 5.00 | 20.00 |
| 3 | ಆರ್.ಡಿ.ಪಿ.ಆರ್ | ಸ್ವಚ್ಛ ಭಾರತ ಅಭಿಯಾನ | 70.00 | 30.00 | 100.00 |
| 4 | ಮಹಿಳಾ & ಮಕ್ಕಳ ಅಭಿವೃದ್ಧಿ | ಭಾಗ್ಯಲಕ್ಷ್ಮಿ | 0.00 | 15.00 | 15.00 |
| | | ಬಳಕೆಯಾಗದ ಮೊತ್ತ | 0.00 | 15.00 | 15.00 |
| | | ಐ.ಸಿ.ಡಿ.ಎಸ್ | 80.00 | 40.00 | 120.00 |
| 5 | ಲೋಕೋಪಯೋಗಿ | ಎಲಿವೇಟೆಡ್ ಕಾರಿಡಾರ್(ಡೀಮ್ಡ್) | 178.00 | 72.00 | 250.00 |
| | | ಇತರೆ ರಸ್ತೆಗಳ ನಿರ್ವಹಣೆ(ಡೀಮ್ಡ್) | 70.00 | 30.00 | 100.00 |
| 6 | ಭಾರಿ ನೀರಾವರಿ | ವಿವಿಧ ನಿಗಮಗಳಿಂದ | 200.00 | 100.00 | 300.00 |
| 7 | ನಗರಾಭಿವೃದ್ಧಿ | ಪೆರಿಫೆರಲ್ ರಿಂಗ್ ರೋಡ್(ಡೀಮ್ಡ್) | 120.00 | 50.00 | 170.00 |
| 8 | ಗಣಿ & ಭೂವಿಜ್ಞಾನ | ಗಣಿ | 1.00 | 1.00 | 2.00 |
| | ಒಟ್ಟು | | 780.82 | 367.00 | 1157.55 |

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಗಿ, ಮಾನ್ಯ ಮುಖ್ಯ ಮಂತ್ರಿಗಳು ಭಾಗ್ಯಲಕ್ಷ್ಮಿ ಯೋಜನೆಯಡಿ ಟಿ.ಎಸ್.ಪಿ ಅನುದಾನ ಹಿಂಪಡೆಯಬಾರದೆಂದು ಸೂಚಿಸಿ, ಅರ್ಹ ಫಲಾನುಭವಿಗಳನ್ನು ಗುರುತಿಸಿ ಸೌಲಭ್ಯ ಒದಗಿಸಲು ಸೂಚಿಸಿದರು.

ಭಾರಿ ನೀರಾವರಿ ಇಲಾಖೆಯಲ್ಲಿ ಈ ಹಿಂದೆ ಮಾಡಿದಂತೆ ನೀರಾವರಿಯೇತರ ಕಾರ್ಯಕ್ರಮಗಳಿಗೆ ವಿವಿಧ ವಿಧಾನ ಸಭಾ ಕ್ಷೇತ್ರಗಳಿಗೆ ನೀಡಲಾಗುತ್ತಿರುವ ಅನುದಾನವನ್ನು ಹಿಂಪಡೆಯಬಾರದೆಂದು ಮಾನ್ಯ ಸಚಿವರಾದ ಶ್ರೀ.ಜೆ.ಸಿ.ಮಾಧುಸ್ವಾಮಿ ಮತ್ತು ಶ್ರೀ. ಬಸವರಾಜ ಬೊಮ್ಮಾಯಿ ಇವರು ಒತ್ತಾಯಿಸಿದರು.

ಮಾನ್ಯ ಉಪಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಸಚಿವರು ಮಾತನಾಡಿ ವಿಧಾನ ಸಭಾ ಕ್ಷೇತ್ರಕ್ಕೆ ಹಂಚಿಕೆಯಾದ ಅನುದಾನವನ್ನು ಹಿಂಪಡೆಯುವುದಿಲ್ಲ. ಇತರೆ ನೀರಾವರಿ ಕಾಮಗಾರಿಗಳಲ್ಲಿ ಉಳಿಕೆಯಾಗುವ ರೂ.೩೦೦.೦೦ ಕೋಟಿ ಅನುದಾನವನ್ನು ಹಿಂಪಡೆಯಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು.

ಅನುದಾನ ಹಿಂಪಡೆಯಲು ಮೇಲ್ಕಂಡಂತೆ ಪ್ರಸ್ತಾಪಿಸಿದ ವಿವರಗಳ ಹಿನ್ನೆಲೆಯಲ್ಲಿ ಸಂಬಂಧಿಸಿದ ಎಲ್ಲಾ ಇಲಾಖೆಗಳು ಅನುದಾನವನ್ನು ಆದ್ಯರ್ಪಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. ಈ ಅನುದಾನವನ್ನು ಯಾವುದೇ ಸಂದರ್ಭದಲ್ಲೂ ಇತರೆ ಸಾಮಾನ್ಯ ಕಾರ್ಯಕ್ರಮಗಳಿಗೆ ವೆಚ್ಚ ಮಾಡದೇ ಪರಿಶಿಷ್ಟ ಜಾತಿ/ಪಂಗಡದ ಜನರಿಗೆ ಮಾತ್ರ ಮನೆಗಳ ನಿರ್ಮಾಣ ಮತ್ತು ಮೂಲಭೂತ ಸೌಕರ್ಯಕ್ಕಾಗಿ ಉಪಯೋಗಿಸಲು ಸ್ಪಷ್ಟವಾಗಿ ತಿಳಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ, ಕೇಂದ್ರ ಪುರಸ್ಕೃತ ಯೋಜನೆಗಳಾದ ಸ್ವಚ್ಛ ಭಾರತ ಹಾಗೂ ಐ.ಸಿ.ಡಿ.ಎಸ್. ಕಾರ್ಯಕ್ರಮಕ್ಕೆ ಒದಗಿಸಲಾದ ಅನುದಾನವನ್ನು ಆದ್ಯರ್ಪಿಸುವ ಮುನ್ನ ಆರ್ಥಿಕ ಇಲಾಖೆಯನ್ನು ಸಂಪರ್ಕಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಈ ಕೆಳಕಂಡ ವಿವಿಧ ಅಭಿವೃದ್ಧಿ ಇಲಾಖೆಗಳಲ್ಲಿ ಮುಂದುವರೆದ ಮತ್ತು ಹೊಸ ಕಾರ್ಯಕ್ರಮಗಳ ವಿವರಗಳನ್ನು ಸಭೆಯ ಗಮನಕ್ಕೆ ತರಲಾಗಿ, ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಪರಿಷತ್ ಅನುಮೋದನೆ ನೀಡಲಾಯಿತು. ವಿವರಗಳು ಈ ಕೆಳಕಂಡಂತಿವೆ.

1. **ಕೃಷಿ ಇಲಾಖೆ :-**

| **SCSP (ರೂ.ಕೋಟಿಗಳಲ್ಲಿ)** | | | **TSP (ರೂ.ಕೋಟಿಗಳಲ್ಲಿ)** | | |
|---|---|---|---|---|---|
| **ಹಂಚಿಕೆ** | **ಖರ್ಚು** | **ಶೇಕಡ** | **ಹಂಚಿಕೆ** | **ಖರ್ಚು** | **ಶೇಕಡ** |
| 574.70 | 129.44 | 23 | 243.97 | 61.01 | 25 |

ಟ್ರಾಕ್ಟರ್ ವಿತರಣೆಗೆ ರೂ.3.00 ಲಕ್ಷ ಸಹಾಯಧನ ನೀಡಲು ಹಿಂದಿನ ಪರಿಷತ್ ಸಭೆಗಳಲ್ಲಿ ನಿರ್ಣಯಿಸಿದ್ದರೂ ಅದನ್ನು ಜಾರಿಗೆ ತರದಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು. 25 ಹೆಚ್.ಪಿ. ಸಾಮರ್ಥ್ಯದ ಟ್ರಾಕ್ಟರ್‌ಗಳಿಗೆ ಗರಿಷ್ಠ ರೂ.3.00 ಲಕ್ಷದವರೆಗೆ ಸಹಾಯಧನ ನೀಡಿ ಕಾರ್ಯಕ್ರಮ ಅನುಷ್ಠಾನಗೊಳಿಸುವಂತೆ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು.

ಮಾನ್ಯ ಸಚಿವರಾದ ಶ್ರೀ.ಜೆ.ಸಿ ಮಾಧುಸ್ವಾಮಿ ಇವರು ಮಾತನಾಡಿ ಇಸ್ರೇಲ್ ಮಾದರಿಯ ಕೃಷಿ ತಾಂತ್ರಿಕತೆ ಗುಚ್ಛಗಳ ಅಭಿವೃದ್ಧಿ ಕಾರ್ಯಕ್ರಮದಡಿ ಸಾಮೂಹಿಕ ಕೃಷಿ ಚಟುವಟಿಕೆಗಳು ಪ್ರಾಯೋಗಿಕವಲ್ಲದ ಕಾರಣ ವೈಯಕ್ತಿಕ ಕೃಷಿ ಚಟುವಟಿಕೆಗಳಿಗೆ ಆದ್ಯತೆ ನೀಡುವುದು ಸೂಕ್ತವೆಂದು ಅಭಿಪ್ರಾಯ ಪಟ್ಟರು.

ಅಭಿವೃದ್ಧಿ ಆಯುಕ್ತರು ಮಾತನಾಡಿ ಈ ಯೋಜನೆಯಡಿ ವೈಯಕ್ತಿಕ ಕೃಷಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಅವಕಾಶವಿದ್ದು, ಸೂಕ್ತ ಮಾರ್ಗಸೂಚಿಯನ್ನು ರೂಪಿಸಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಯೋಜನೆಯಡಿ ಇದುವರೆಗೆ ಮಾರ್ಗಸೂಚಿಗಳನ್ನು ರೂಪಿಸದೇ ಇರುವ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಶ್ನಿಸಿದಾಗ ಸಭೆಯಲ್ಲಿ ಹಾಜರಿದ್ದ ಕೃಷಿ ಇಲಾಖೆಯ ಅಧಿಕಾರಿಗಳು ಸದರಿ ಕಾರ್ಯಕ್ರಮವು ಬಂಡವಾಳ ಲೆಕ್ಕ ಶೀರ್ಷಿಕೆಯಡಿ ಇದ್ದು ರಾಜಸ್ವ ಲೆಕ್ಕ ಶೀರ್ಷಿಕೆಯಡಿ ಒದಗಿಸಲು ಆರ್ಥಿಕ ಇಲಾಖೆಯನ್ನು ಕೋರಿದ್ದು, ಇದರಿಂದಾಗಿ ಮಾರ್ಗಸೂಚಿ ಸಿದ್ಧಪಡಿಸಲು ವಿಳಂಬವಾಗಿರುತ್ತದೆ ಎಂದು ತಿಳಿಸಿದರು.

ಇಸ್ರೇಲ್ ಮಾದರಿಯ ಕೃಷಿ ತಾಂತ್ರಿಕತೆ ಗುಚ್ಚಗಳ ಅಭಿವೃದ್ಧಿ ಕಾರ್ಯಕ್ರಮವು ನೂತನ ಯೋಜನೆಯಾಗಿದ್ದು ಇದುವರೆಗೆ ಮಾರ್ಗಸೂಚಿಯನ್ನು ಹೊರಡಿಸದೇ ಇರುವ ಕಾರಣ ಸದರಿ ಕಾರ್ಯಕ್ರಮಕ್ಕೆ ಒದಗಿಸಿರುವ ರೂ.34.05 ಕೋಟಿಗಳನ್ನು ಆದ್ಯರ್ಪಿಸಲು ತೀರ್ಮಾನಿಸಲಾಯಿತು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ)**

**2. ತೋಟಗಾರಿಕೆ ಇಲಾಖೆ:-**

**(ರೂ.ಕೋಟಿಗಳಲ್ಲಿ)**

| SCSP | | | TSP | | |
|---|---|---|---|---|---|
| **ಹಂಚಿಕೆ** | **ಖರ್ಚು** | **ಶೇಕಡ** | **ಹಂಚಿಕೆ** | **ಖರ್ಚು** | **ಶೇಕಡ** |
| 133.53 | 8.50 | 6 | 53.14 | 3.19 | 6 |

ತೋಟಗಾರಿಕೆ ಇಲಾಖೆಯ ಕಾರ್ಯಕ್ರಮಗಳಲ್ಲಿ ಕೂಡ ಇಸ್ರೇಲ್ ಮಾದರಿಯ ಕೃಷಿ ತಾಂತ್ರಿಕತೆ ಗುಚ್ಚಗಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ರೂ.31.50 ಕೋಟಿ ಅನುದಾನ ಒದಗಿಸಲಾಗಿದ್ದು. ಇದರಲ್ಲಿ ಸಹ ಇದುವರೆಗೆ ಮಾರ್ಗಸೂಚಿಯನ್ನು ಹೊರಡಿಸದೇ ಇರುವ ಕಾರಣ ಸದರಿ ಕಾರ್ಯಕ್ರಮಕ್ಕೆ ಒದಗಿಸಿರುವ ರೂ.31.50 ಕೋಟಿಗಳನ್ನು ಆದ್ಯರ್ಪಿಸಲು ಹಾಗೂ ಇನ್ನುಳಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ತೀರ್ಮಾನಿಸಲಾಯಿತು.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ)**

**3. ರೇಷ್ಮೆ ಇಲಾಖೆ:-**

**(ರೂ.ಕೋಟಿಗಳಲ್ಲಿ)**

| SCSP | | | TSP | | |
|---|---|---|---|---|---|
| **ಹಂಚಿಕೆ** | **ಖರ್ಚು** | **ಶೇಕಡ** | **ಹಂಚಿಕೆ** | **ಖರ್ಚು** | **ಶೇಕಡ** |
| 16.92 | 3.59 | 21 | 8.28 | 1.67 | 20 |

ರೇಷ್ಮೆ ಇಲಾಖೆಯಲ್ಲಿ ಯಾವುದೇ ಅನುದಾನ ಉಳಿಕೆಯಾಗುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಗಿ. ಅನುಮೋದಿತ ಕಾರ್ಯಕ್ರಮಗಳನ್ನು ಮುಂದುವರೆಸಲು ಸೂಚಿಸಲಾಯಿತು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ರೇಷ್ಮೆ ಇಲಾಖೆ)**

4. ಪಶು ಸಂಗೋಪನೆ ಇಲಾಖೆ:-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 162.50 | 12.39 | 8 | 91.59 | 6.83 | 7 |

ಪಶುಸಂಗೋಪನೆ ಇಲಾಖೆಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ಹಾಲು ಉತ್ಪಾದಕರಿಗೆ ನೀಡುವ ಪ್ರೋತ್ಸಾಹಧನವನ್ನು ರೂ.5.00 ರಿಂದ ರೂ.6.00 ಗೆ ಹೆಚ್ಚಿಸಿದ್ದು, ಸೌಲಭ್ಯ ಪಡೆಯುತ್ತಿರುವ ಹಾಲು ಉತ್ಪಾದಕರ ವಿವರವನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿ, ಪಶುಸಂಗೋಪನೆ ಇಲಾಖೆ)

5. ಮೀನುಗಾರಿಕೆ ಇಲಾಖೆ:-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 3.64 | 0.57 | 16 | 1.07 | 0.10 | 9 |

ಮೀನುಗಾರಿಕೆ ಇಲಾಖೆಯಲ್ಲಿ ಯಾವುದೇ ಅನುದಾನ ಉಳಿಕೆಯಾಗುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಗಿ, ಅನುಮೋದಿತ ಕಾರ್ಯಕ್ರಮಗಳನ್ನು ಮುಂದುವರೆಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿ, ಮೀನುಗಾರಿಕೆ ಇಲಾಖೆ)

6. ಸಾರಿಗೆ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 178.28 | 39.56 | 22 | 87.12 | 20.05 | 23 |

ಈ ಇಲಾಖೆಯಲ್ಲಿ ಮುಖ್ಯವಾಗಿ ಅನುದಾವನ್ನು ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡಲು ಒದಗಿಸಲಾಗಿದೆ ಮತ್ತು ಹೊಸ ಕಾರ್ಯಕ್ರಮಗಳಾದ ಆಟೋ ಮತ್ತು ವಾಹನ ಚಾಲಕರ ಕಲ್ಯಾಣ ಪ್ರಾಧಿಕಾರ ಹಾಗೂ ಆಟೋ ಮತ್ತು ಟ್ಯಾಕ್ಸಿ ಚಾಲಕರಿಗೆ ವಸತಿ ಯೋಜನೆಗಳ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.

ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಪ್ರಾಧಿಕಾರಗಳ ರಚನೆ ಮಾಡುವ ಅವಶ್ಯಕತೆ ಇರುವುದಿಲ್ಲ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿ, ಇದರ ಬದಲಾಗಿ ಆಟೋ ಮತ್ತು ವಾಹನ ಚಾಲಕರ ವೈಯಕ್ತಿಕ ಅಭಿವೃದ್ಧಿಗೆ ಪೂರಕವಾಗುವ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಸೂಚಿಸಿದರು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ)

7. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1831.44 | 152.05 | 8 | 811.55 | 120.79 | 15 |

ಮಾನ್ಯ ಸಚಿವರಾದ ಶ್ರೀ. ಜೆ.ಸಿ.ಮಾಧುಸ್ವಾಮಿ ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗೆ ಒದಗಿಸಿದ ಅನುದಾನದಲ್ಲಿ ಕೇವಲ ಶೇ.8 ರಷ್ಟು ವೆಚ್ಚವಾಗಿರುವ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು. ಕೊಳವೆಬಾವಿ ಕೊರೆಯಲು ಯಾವುದೇ ಅನುದಾನ ಇಲ್ಲವೆಂದು ತಿಳಿಸಿದ್ದನ್ನು ಪ್ರಸ್ತಾಪಿಸಿದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಟಾಸ್ಕ್ ಫೋರ್ಸ್ ಅನುಮೋದನೆ ಇಲ್ಲದೆ ಕೆಲವು ಕಡೆ ಕೊಳವೆಬಾವಿ ಕೊರೆದಿದ್ದು. ಅದರ ಬಿಲ್‌ಪಾವತಿಗೆ ತೊಂದರೆ ಉಂಟಾಗಿದೆ ಎಂದು ಮತ್ತು ಟಾಸ್ಕ್ ಫೋರ್ಸ್ ಅನುಮೋದನೆ ನೀಡಿದ ಕಡೆ ಯಾವುದೇ ತೊಂದರೆ ಇರುವುದಿಲ್ಲವೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಕೆ.ಎಸ್.ಈಶ್ವರಪ್ಪ ಇವರು ಮಾತನಾಡಿ ಟಾಸ್ಕ್ ಫೋರ್ಸ್ ಅನುಮೋದನೆ ಪಡೆಯದೇ ಕೊಳವೆಬಾವಿಗಳನ್ನು ಕೊರೆಯಲಾಗುತ್ತಿದ್ದು. ಅದರಿಂದ ಸಮಸ್ಯೆಗಳಾಗುತ್ತಿದೆ ಈ ಬಗ್ಗೆ ಚರ್ಚಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

ಮಾನ್ಯ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿ ಇವರು ಮತ್ತೆ ಮಾತನಾಡಿ ಕುಡಿಯುವ ನೀರು ಒದಗಿಸುವುದು ಆದ್ಯ ಕರ್ತವ್ಯವಾಗಿರುವುದರಿಂದ ಕೊಳವೆಬಾವಿಗಳನ್ನು ಕೊರೆಸಲಾಗಿದ್ದು. ಅವಶ್ಯ ಅನುದಾನ ಬಿಡುಗಡೆ ಮಾಡಲು ಕೋರಿದರು.

ಸನ್ಮಾನ್ಯ ಮುಖ್ಯಮಂತ್ರಿಗಳು. ಕೊಳವೆ ಬಾವಿಗಳನ್ನು ಕೊರೆಯುವ ಪೂರ್ವದಲ್ಲಿ ನಿಯಮಾನುಸಾರ ಟಾಸ್ಕ್ ಫೋರ್ಸ್ ಅನುಮೋದನೆ ಪಡೆದು ಅನುಷ್ಠಾನಗೊಳಿಸಲು ಸೂಚಿಸಿದರು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)

8. ಅರಣ್ಯ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 5.64 | 0.75 | 13 | 2.34 | 0.32 | 14 |

ಅರಣ್ಯ ಇಲಾಖೆಯಲ್ಲಿ ಯಾವುದೇ ಅನುದಾನ ಉಳಿಕೆಯಾಗುವುದಿಲ್ಲವೆಂದು ಸಭೆಯ ಗಮನಕ್ಕೆ ತರಲಾಗಿ. ಅನುಮೋದಿತ ಕಾರ್ಯಕ್ರಮಗಳನ್ನು ಮುಂದುವರೆಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ)

9. ಸಹಕಾರ ಇಲಾಖೆ:-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 564.87 | 15.40 | 3 | 412.00 | 21.43 | 5 |

ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ ಇವರು ಸೆಪ್ಟಂಬರ್ ತಿಂಗಳಲ್ಲಿ ಸಾಲ ಮನ್ನಾ ಯೋಜನೆಯಡಿ ಒಟ್ಟು ರೂ.690.00 ಕೋಟಿ ವೆಚ್ಚ ಮಾಡಲಾಗಿದ್ದು, ಸುಮಾರು ರೂ.39.00 ಕೋಟಿ ಅನುದಾನ ಉಳಿಕೆಯಾಗುತ್ತದೆ ಎಂದು ತಿಳಿಸಿದರು. ಸದರಿ ಮೊತ್ತವನ್ನು ಆದ್ಯರ್ಪಿಸಲು ಕ್ರಮಕೈಗೊಳ್ಳುವಂತೆ ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು ಸೂಚಿಸಿದರು.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ)**

10. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 115.27 | 12.40 | 11 | 63.05 | 7.24 | 11 |

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ದೊರೆಯದೇ ಶಿಕ್ಷಣ ಮುಂದುವರೆಸಲು ತೊಂದರೆಯಾಗುತ್ತಿರುವ ಬಗ್ಗೆ ಪ್ರಸ್ತಾಪಿಸಿ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಕಲ್ಪಿಸಲು ಅನುಕೂಲವಾಗುವಂತೆ ಮಂಜೂರಾತಿ ಸಂಖ್ಯೆ ಹೆಚ್ಚಿಸಲು ಮತ್ತು ಅವಶ್ಯ ಮೂಲಭೂತ ಸೌಲಭ್ಯ ಒದಗಿಸಲು ಕ್ರಮವಹಿಸುವಂತೆ ಸೂಚಿಸಿದರು.

ಮಾನ್ಯ ಸಚಿವರಾದ ಶ್ರೀ. ಜೆ.ಸಿ ಮಾಧುಸ್ವಾಮಿ ಇವರು ಮಾತನಾಡಿ ಜಿಲ್ಲೆಗಳಲ್ಲಿ ಕೆಲವು ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಸ್ಥಾನಗಳನ್ನು ಬೇಡಿಕೆಯಿರುವ ಕಡೆ ವರ್ಗಾಯಿಸಿ ಸಮಸ್ಯೆ ಬಗೆಹರಿಸಲು ತಿಳಿಸಿದರು. ಅದರಂತೆ ಈಗಾಗಲೇ ಕ್ರಮವಹಿಸಲಾಗಿದೆ ಮತ್ತು ತುಮಕೂರು ಜಿಲ್ಲೆಯ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಕ್ರಮವಹಿಸಲಾಗುವುದೆಂದು ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ. ನರಸಿಂಹನಾಯಕ್ ಇವರು ಮಾತನಾಡಿ ವಿದ್ಯಾರ್ಥಿನಿಲಯಗಳಿಗೆ ಸೂಕ್ತ ಕಟ್ಟಡ ನಿರ್ಮಾಣ ಮಾಡಲು ಹೆಚ್ಚಿನ ಅನುದಾನ ಒದಗಿಸಲು ಕೋರಿದರು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)**

11. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 990.73 | 131.43 | 13 | 408.72 | 45.13 | 11 |

ಮಾನ್ಯ ಮುಖ್ಯಮಂತ್ರಿಗಳು, ಭಾಗ್ಯಲಕ್ಷ್ಮಿ ಕಾರ್ಯಕ್ರಮವು ಪ್ರಮುಖ ಕಾರ್ಯಕ್ರಮವಾಗಿದ್ದು, ಪರಿಶಿಷ್ಟ ಜಾತಿ/ಪಂಗಡದ ಹೆಣ್ಣುಮಕ್ಕಳ ಸಬಲೀಕರಣಕ್ಕೆ ಪೂರಕವಾಗಿರುವುದರಿಂದ ಈ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಹಿಂಪಡೆಯದೇ ಎಲ್ಲಾ ಅರ್ಹ ಫಲಾನುಭವಿಗಳಿಗೆ ಭಾಗ್ಯಲಕ್ಷ್ಮಿ ಬಾಂಡ್ ನೀಡಲು ಕ್ರಮವಹಿಸುವಂತೆ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೇ ಸ್ವಸಹಾಯ ಗುಂಪುಗಳಿಗೆ ನೀಡಬೇಕಾದ ಸುತ್ತುನಿಧಿ ಮತ್ತು ಸಹಾಯಧನವನ್ನು ಆದ್ಯತೆ ಮೇಲೆ ತ್ವರಿತವಾಗಿ ಬಿಡುಗಡೆ ಮಾಡಲು ಸಹ ತಿಳಿಸಿದರು.

ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು ಮಾತನಾಡಿ ಗುರುತಿಸಲ್ಪಟ್ಟ ದೇವದಾಸಿಯರಿಗೆ ಪಿಂಚಣಿ ಮತ್ತು ಮನೆಗಳ ನಿರ್ಮಾಣ ಕಾರ್ಯಕ್ರಮಗಳನ್ನು ಮುಂದುವರೆಸಲು ಸೂಚಿಸಿದರು.

ಐ.ಸಿ.ಡಿ.ಎಸ್ ಕಾರ್ಯಕ್ರಮದಡಿ ಉಳಿಕೆಯಾಗಿವ ಅನುದಾನವನ್ನು ಆಧ್ಯರ್ಪಣೆ ಮಾಡಿ ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಬಂಡವಾಳ ಲೆಕ್ಕ ಶೀರ್ಷಿಕೆಯಡಿ ಪೂರಕ ಅಂದಾಜಿನಲ್ಲಿ ಒದಗಿಸಲು ಸೂಚಿಸಲಾಯಿತು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)**

12. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 6.44 | 0.03 | 0 | 1.98 | 0.00 | 0 |

ಇದುವರೆಗೆ ಶೂನ್ಯ ಪ್ರಗತಿಯಾಗಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ)**

13. ಪ್ರವಾಸೋದ್ಯಮ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 8.99 | 2.25 | 25 | 3.75 | 0.94 | 25 |

ಪ್ರವಾಸೋದ್ಯಮ ಇಲಾಖೆಯಿಂದ ಅನುಷ್ಠಾನ ಮಾಡುವ ಕಾರ್ಯಕ್ರಮಗಳೊಂದಿಗೆ ಪ್ರವಾಸಿ ತಾಣಗಳಲ್ಲಿ ಮಾರ್ಗದರ್ಶಕರಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ)

14. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 13.18 | 2.80 | 21 | 12.09 | 1.62 | 13 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ).

15. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 815.50 | 224.64 | 28 | 299.31 | 93.81 | 31 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಹಾಗೂ ಸೌಲಭ್ಯ ಪಡೆಯುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳ ವಿವರಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ)

16. ಕಂದಾಯ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1917.97 | 422.25 | 22 | 793.17 | 174.62 | 22 |

ಕಂದಾಯ ಇಲಾಖೆಯಿಂದ ವಿವಿಧ ರೀತಿಯ ಪಿಂಚಣಿ ಸೌಲಭ್ಯ ನೀಡುತ್ತಿದ್ದು, ಕಳೆದ ಆರು ತಿಂಗಳುಗಳಿಂದ ಈ ಸೌಲಭ್ಯ ದೊರಯದೇ ಇರುವ ಬಗ್ಗೆ ಮಾನ್ಯ ಸಚಿವರಾದ ಶ್ರೀ.ಜೆ.ಸಿ. ಮಾಧುಸ್ವಾಮಿ, ಮತ್ತು ಮಾನ್ಯ ಸದಸ್ಯರಾದ ಶ್ರೀ.ನರಸಿಂಹ ನಾಯಕ್ ಹಾಗೂ ಶ್ರೀ.ಎನ್.ಮಹೇಶ್ ಇವರುಗಳು ಪ್ರಸ್ತಾಪಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ಮಾತನಾಡಿ ಪೋಸ್ಟ್ ಆಫೀಸ್ ಮೂಲಕ ಪಿಂಚಣಿಯನ್ನು ಸಕಾಲದಲ್ಲಿ ನೀಡಲು ಸಾಧ್ಯವಾಗುತ್ತಿಲ್ಲವಾದ ಕಾರಣ ಫಲಾನುಭವಿಗಳ ಬ್ಯಾಂಕ್ ಖಾತೆಗಳನ್ನು ತೆರೆಯಲು ಕ್ರಮವಹಿಸಿದ್ದಲ್ಲಿ ಡಿ.ಬಿ.ಟಿ ಮೂಲಕ ಫಲಾನುಭವಿಗಳ ಖಾತೆಗೆ ವಿಳಂಬವಿಲ್ಲದೆ ವರ್ಗಾಯಿಸಬಹುದೆಂದು ತಿಳಿಸಿದರು.

ಪಿಂಚಣಿ ವಿತರಣೆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರು ತಿಳಿಸಿದರು.

ವಿವಿಧ ಪಿಂಚಣಿ ಸೌಲಭ್ಯ ಪಡೆಯುತ್ತಿರುವ ಫಲಾನುಭವಿಗಳ ವಿವರವನ್ನು ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಲು ಸಹ ಸೂಚಿಸಲಾಯಿತು.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ)**

17. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ:-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 3.00 | 0.75 | 25 | 1.00 | 0.25 | 25 |

ಹಿಂದಿನ ವರ್ಷದಿಂದ ಸಮಾಜ ಕಲ್ಯಾಣ ಇಲಾಖೆಯಿಂದ ಸ್ಟಾರ್ಟ್ ಅಪ್ (ಉನ್ನತಿ) ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಾಗುತ್ತಿದ್ದು, ಸದರಿ ಅನುದಾನವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲು ತೀರ್ಮಾನಿಸಲಾಗಿತ್ತು. ದಿನಾಂಕ:13-09-2019 ರಂದು ನಡೆದ ನೋಡಲ್ ಏಜೆನ್ಸಿ ಸಭೆಯಲ್ಲಿ ಸದರಿ ಯೋಜನೆಯನ್ನು ಐ.ಟಿ & ಬಿ.ಟಿ ಇಲಾಖೆಯಿಂದಲೇ ಅನುಷ್ಟಾನ ಮಾಡಲು ತೀರ್ಮಾನಿಸಲಾಗಿದೆ ಎಂದು ಸಭೆಯ ಗಮನಕ್ಕೆ ತರಲಾಯಿತು.

ಸದರಿ ಯೋಜನೆಯನ್ನು ಐ.ಟಿ. & ಬಿ.ಟಿ ಇಲಾಖೆಯಿಂದಲೇ ಅನುಷ್ಠಾನಗೊಳಿಸಲಾಗುವುದೆಂದು ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ತಿಳಿಸಿದ್ದು, ಅನುಮೋದನೆ ನೀಡಲಾಯಿತು.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ)**

18. ವಸತಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 933.79 | 212.08 | 23 | 304.20 | 42.69 | 14 |

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಮನೆಗಳಿಗೆ ಸಾಕಷ್ಟು ಹಾನಿಯಾಗಿದ್ದು, ಈ ಬಗ್ಗೆ ಮಾಹಿತಿ ಸಂಗ್ರಹಿಸಿ ವಸತಿ ಸೌಲಭ್ಯ ಕಲ್ಪಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು. ಅಲ್ಲದೇ ನಗರ ಪ್ರದೇಶಗಳಲ್ಲಿ ಸ್ಲಂಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ವಾಸಿಸುತ್ತಿದ್ದು, ಕೊಳಚೆ ನಿರ್ಮೂಲನ ಮಂಡಳಿಯ ಮೂಲಕ ಅಂತಹ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಬೇಕು ಎಂದು ಸೂಚಿಸಿದರು.

ವಸತಿ ಇಲಾಖೆಯ ಕಾರ್ಯದರ್ಶಿಗಳು, ಅಂಬೇಡ್ಕರ್ ನಿವಾಸ್ ಯೋಜನೆಯಡಿ ಹೆಚ್ಚಿನ ಅನುದಾನ ಬೇಕಾಗಿದ್ದು ಹಾಗೂ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನವನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಿದಲ್ಲಿ ಆದ್ಯತೆ ಮೇಲೆ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಈಗಾಗಲೇ ಅನುಮೋದಿಸಲಾಗಿ ಅಪೂರ್ಣವಾಗಿರುವ ಮನೆಗಳಿಗೆ ಅನುದಾನ ನೀಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು ಮಾತನಾಡುತ್ತಾ, ವಿವಿಧ ಇಲಾಖೆಗಳಿಂದ ಹಿಂಪಡೆಯುವ ಅನುದಾನವನ್ನು ವಸತಿ ಇಲಾಖೆಗೆ ಒದಗಿಸುವುದಾಗಿ ಹಾಗೂ ಡಿಸೆಂಬರ್ ತಿಂಗಳಲ್ಲಿ ಮತ್ತೊಮ್ಮೆ ಪ್ರಗತಿ ಪರಿಶೀಲಿಸಿ ವಿವಿಧ ಇಲಾಖೆಗಳಲ್ಲಿ ಉಳಿಕೆ ಅನುದಾನ ಲಭ್ಯವಿದ್ದಲ್ಲಿ ವಸತಿ ಇಲಾಖೆ ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಸರ್ಕಾರದ ಕಾರ್ಯದರ್ಶಿ, ವಸತಿ ಇಲಾಖೆ)**

19. ಉನ್ನತ ಶಿಕ್ಷಣ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 95.58 | 31.22 | 33 | 34.96 | 6.72 | 19 |

ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಮಾತನಾಡಿ "ಡಾ:ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್"ಗೆ ಅನುದಾನ ಬಿಡುಗಡೆ ಮಾಡುವಲ್ಲಿ ವಿಳಂಬವಾಗಿದೆ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಯವರು ಮಾತನಾಡಿ, ಪ್ರಸಕ್ತ ಸಾಲಿನಲ್ಲಿ "ಡಾ:ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್"ಗೆ ರೂ.10.00 ಕೋಟಿಗಳನ್ನು ನಿಗದಿಪಡಿಸಿದ್ದು, ಅನುದಾನ ಬಿಡುಗಡೆ ಮಾಡಲು ಕೂಡಲೇ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

2019-20 ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ರೂ.3.61 ಕೋಟಿಗಳನ್ನು "ಡಾ:ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್" ಇದರ ಮುಂದುವರೆದ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವುದಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ)

## 20. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 786.69 | 182.08 | 23 | 315.06 | 59.79 | 19 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ)

## 21. ಕೈಮಗ್ಗ ಮತ್ತು ಜವಳಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 52.19 | 10.14 | 19 | 21.29 | 4.15 | 19 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೈಮಗ್ಗ ಮತ್ತು ಜವಳಿ ಇಲಾಖೆ)

## 22. ಭಾರಿ ಮತ್ತು ಮಧ್ಯಮ ಕೈಗಾರಿಕಾ ಇಲಾಖೆ ಮತ್ತು ಸಣ್ಣ ಕೈಗಾರಿಕೆ ಇಲಾಖೆ:-

(ರೂ.ಕೋಟಿಗಳಲ್ಲಿ)

| ಇಲಾಖೆ | SCSP | | | TSP | | |
|---|---|---|---|---|---|---|
| | ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| ಭಾರಿ & ಮಧ್ಯಮ ಕೈಗಾರಿಕೆ | 1.08 | 0.00 | 0 | 0.20 | 0.00 | 0 |
| ಸಣ್ಣ ಕೈಗಾರಿಕೆ | 55.69 | 0.00 | 0 | 19.17 | 0.00 | 0 |

ಇದುವರೆವಿಗೂ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗಳಡಿ ಶೂನ್ಯ ಪ್ರಗತಿ ಇರುವ ಬಗ್ಗೆ ಎಲ್ಲಾ ಸದಸ್ಯರುಗಳು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು.

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು ಮತ್ತು ಕೈಗಾರಿಕಾ ನಿವೇಶನ ಮತ್ತು ಶೆಡ್‌ಗಳಿಗೆ ಸಹಾಯಧನವನ್ನು ಶೇ.50 ರಿಂದ ಶೇ.75 ಕ್ಕೆ ಹೆಚ್ಚಿಸುವ ಬಗ್ಗೆ ಸರ್ಕಾರದ ಆದೇಶ ಹೊರಡಿಸುವ ಕುರಿತು ಸಹ ಕ್ರಮ ವಹಿಸುವುದು.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ)**

**23. ಗಣಿ ಮತ್ತು ಭೂ ವಿಜ್ಞಾನ ಇಲಾಖೆ :-**

**(ರೂ.ಕೋಟಿಗಳಲ್ಲಿ)**

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1.00 | 0.00 | 0 | 1.00 | 0.00 | 0 |

ಸದರಿ ಇಲಾಖೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ನೇರವಾಗಿ ಪ್ರಯೋಜನವಾಗುವ ಯಾವುದೇ ಕಾರ್ಯಕ್ರಮಗಳು ಇಲ್ಲದಿರುವ ಕಾರಣ ಹಂಚಿಕೆಯಾಗಿರುವ ಅನುದಾನವನ್ನು ಹಿಂಪಡೆಯಲು ತೀರ್ಮಾನಿಸಲಾಯಿತು.

**(ಕ್ರಮ: ಸರ್ಕಾರದ ಕಾರ್ಯದರ್ಶಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ)**

**24. ನಗರಾಭಿವೃದ್ಧಿ ಇಲಾಖೆ:-**

**(ರೂ.ಕೋಟಿಗಳಲ್ಲಿ)**

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1061.00 | 95.55 | 9 | 403.97 | 36.60 | 9 |

ಮಾನ್ಯ ಉಪಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಸಚಿವರು ಮಾತನಾಡಿ. ನಗರಾಭಿವೃದ್ಧಿ ಇಲಾಖೆಯಲ್ಲಿ ಫೆರಿಫೆರಲ್ ರಿಂಗ್ ರಸ್ತೆಗೆ ರೂ.170.00 ಕೋಟಿಗಳನ್ನು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯಡಿ ಒದಗಿಸಿರುವುದು ಸೂಕ್ತವಲ್ಲವೆಂದು ಮತ್ತು ಅದನ್ನು ಆದ್ಯರ್ಪಣೆ ಮಾಡಲು ದಿನಾಂಕ:13-09-2019 ರಂದು ನಡೆದ ನೋಡಲ್ ಏಜೆನ್ಸಿ ಸಭೆಯಲ್ಲಿ ಸೂಚಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

ಮಾನ್ಯ ಸಚಿವರಾದ ಶ್ರೀ.ಜೆ.ಸಿ.ಮಾಧುಸ್ವಾಮಿ ಹಾಗೂ ಸದಸ್ಯರಾದ ಶ್ರೀ.ನರಸಿಂಹ ನಾಯಕ್ ಮತ್ತು ಶ್ರೀ.ಎನ್.ಮಹೇಶ್ ಇವರುಗಳು ಫೆರಿಫೆರಲ್ ರಿಂಗ್ ರಸ್ತೆ ಮತ್ತು ಎಲಿವೇಟೆಡ್ ಕಾರಿಡಾರ್ ಯೋಜನೆಗಳು ಪರಿಶಿಷ್ಟ ಜಾತಿ/ಪಂಗಡದವರಿಗೆ ನೇರವಾಗಿ ಪ್ರಯೋಜನವಾಗದೇ ಇರುವುದರಿಂದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಲ್ಲಿ ವೆಚ್ಚ ಭರಿಸುವುದು ಸೂಕ್ತವಲ್ಲವೆಂದು ತಿಳಿಸಿ ಮುಂದಿನ ಹಣಕಾಸು ವರ್ಷದಲ್ಲಿ ಇಂತಹ ಕಾರ್ಯಕ್ರಮಗಳಿಗೆ ಯಾವುದೇ ಅನುದಾನ ನಿಗದಿಪಡಿಸಬಾರದೆಂದು ಒತ್ತಾಯಿಸಿದರು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಮಾತನಾಡಿ ಹಂಚಿಕೆ ಮಾಡಬಹುದಾದ ಅನುದಾನದ ವ್ಯಾಖ್ಯೆಯನ್ನು ಬದಲಾಯಿಸಲು ಕಾಯ್ದೆಗೆ ತಿದ್ದುಪಡಿ ತರಬೇಕಾಗಿದೆ. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಚರ್ಚಿಸಿ ಪ್ರಸ್ತಾವನೆ ಸಿದ್ಧಪಡಿಸುವುದಾಗಿ ತಿಳಿಸಿದರು.

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರ್ಥಿಕ ಇಲಾಖೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ)

## 25. ಲೋಕೋಪಯೋಗಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1303.61 | 104.55 | 8 | 566.00 | 40.64 | 7 |

ಸದರಿ ಇಲಾಖೆಗೆ ಹಂಚಿಕೆಯಾದ ಅನುದಾನದಲ್ಲಿ ಎಲಿವೇಟೆಡ್ ಕಾರಿಡಾರ್‌ಗೆ ಸಂಬಂಧಿಸಿದಂತೆ ಉಳಿಕೆಯಾಗುವ ರೂ.350.00 ಕೋಟಿಗಳನ್ನು ಹಿಂಪಡೆಯಲು ತೀರ್ಮಾನಿಸಲಾಯಿತು.

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ, ಎಲಿವೇಟೆಡ್ ಕಾರಿಡಾರ್‌ಗೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಇನ್ನು ಮುಂದೆ ಹಂಚಿಕೆ ಮಾಡಬಾರದೆಂದು ಮತ್ತು ಅಂತಹ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಂಚಿಕೆ ಮಾಡುವ ಬಗ್ಗೆ ಪರಿಶೀಲಿಸುವಂತೆ ಸೂಚಿಸಿದರು.

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ)

## 26. ಭಾರೀ ನೀರಾವರಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1469.65 | 471.50 | 32 | 919.40 | 294.77 | 32 |

ಮಾನ್ಯ ಸಚಿವರಾದ ಶ್ರೀ.ಜೆ.ಸಿ.ಮಾಧುಸ್ವಾಮಿ ಮತ್ತು ಪರಿಷತ್ತಿನ ಇತರ ಸದಸ್ಯರು ಮಾತನಾಡಿ, ನೀರಾವರಿಯೇತರ ಕಾರ್ಯಕ್ರಮಗಳಿಗೆ ವಿಧಾನಸಭಾ ಕ್ಷೇತ್ರವಾರು ಹಂಚಿಕೆಯಾಗಿರುವ ಅನುದಾನವನ್ನು ಈ ಹಂತದಲ್ಲಿ ಅನುದಾನ ಹಿಂಪಡೆಯುವುದು ಸೂಕ್ತವಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿ ವಿಧಾನಸಭಾ ಕ್ಷೇತ್ರಕ್ಕೆ ನೀರಾವರಿಯೇತರ ಕಾರ್ಯಕ್ರಮಗಳಿಗೆ ಹಂಚಿಕೆಯಾದ ಅನುದಾನವನ್ನು ಯಾವುದೇ ಕಾರಣಕ್ಕೂ ಹಿಂಪಡೆಯಬಾರದೆಂದು ಒತ್ತಾಯಿಸಿದರು.

ಮಾನ್ಯ ಉಪಮುಖ್ಯಮಂತ್ರಿ ಹಾಗೂ ಸಮಾಜ ಕಲ್ಯಾಣ ಸಚಿವರು ಮಾತನಾಡಿ ವಿಧಾನ ಸಭಾ ಕ್ಷೇತ್ರಕ್ಕೆ ಹಂಚಿಕೆಯಾದ ಅನುದಾನವನ್ನು ಹಿಂಪಡೆಯುವುದಿಲ್ಲ. ಆದರೆ ನಿಗಮಗಳ ಇತರೆ

ಕಾರ್ಯಕ್ರಮಗಳಲ್ಲಿ ಉಳಕೆಯಾಗುವ ರೂ.300.00 ಕೋಟಿ ಅನುದಾನವನ್ನು ಹಿಂಪಡೆಯಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು.

ದಿನಾಂಕ:13-09-2019ರ ನೋಡಲ್ ಏಜೆನ್ಸಿ ಸಭೆಯಲ್ಲಿ ಚರ್ಚಿಸಿರುವಂತೆ ಹಿಂದಿನ ವರ್ಷದಲ್ಲಿ ವಿವಿಧ ನಿಗಮಗಳ ಅಚ್ಚುಕಟ್ಟು ಪ್ರದೇಶಗಳಲ್ಲಿ ಬರುವ ಕ್ರೈಸ್ ವಸತಿ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡಲು ರೂ.500.00 ಕೋಟಿಗಳನ್ನು ಕ್ರೈಸ್ ಸಂಸ್ಥೆಗೆ ನೀಡುವಂತೆ ಮಾನ್ಯ ಉಪಮುಖ್ಯಮಂತ್ರಿಯವರು ಹಾಗೂ ಸಮಾಜ ಕಲ್ಯಾಣ ಸಚಿವರು ಸೂಚಿಸಿದರು. ಈ ಅನುದಾನವನ್ನು ಅಚ್ಚುಕಟ್ಟು ಪ್ರದೇಶಗಳಲ್ಲಿ ಗುರ್ತಿಸಲ್ಪಟ್ಟ ವಸತಿ ಶಾಲೆಗಳ ಕಟ್ಟಡಗಳನ್ನು ನಿರ್ಮಿಸಲು ಉಪಯೋಗಿಸಲಾಗುವುದು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಭಾರೀ ನೀರಾವರಿ ಇಲಾಖೆ)

27. ಸಣ್ಣ ನೀರಾವರಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 253.06 | 85.74 | 34 | 115.23 | 33.17 | 29 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಇಲಾಖೆ)

28. ವೈದ್ಯಕೀಯ ಶಿಕ್ಷಣ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 36.42 | 6.64 | 18 | 13.36 | 2.93 | 22 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ)

29. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | TSP |
|---|---|

| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
|---|---|---|---|---|---|
| 671.29 | 150.94 | 22 | 290.97 | 64.75 | 22 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ,ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)

30. ಕಾರ್ಮಿಕ ಇಲಾಖೆ:-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 3.35 | 0.84 | 25 | 1.95 | 0.49 | 25 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿ,ಕಾರ್ಮಿಕ ಇಲಾಖೆ)

31. ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಮತ್ತು ತರಬೇತಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 105.37 | 1.75 | 2 | 43.95 | 0.88 | 2 |

ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ. ಶೇ.2 ರಷ್ಟು ಪ್ರಗತಿ ಸಾಧಿಸಿರುವ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಪರಿಶಿಷ್ಟ ಜಾತಿ/ಪಂಗಡದ ನಿರುದ್ಯೋಗಿ ಯುವಕ/ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಈ ಯೋಜನೆಯು ಸಹಕಾರಿಯಾಗಿದ್ದು ಕೂಡಲೇ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಂತೆ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.

ಮಾನ್ಯ ಸದಸ್ಯರಾದ ಶ್ರೀ.ನರಸಿಂಹ ನಾಯಕ್ ಇವರು ಮಾತನಾಡಿ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳು ಈ ವರ್ಗದ ಯುವಕ/ಯುವತಿಯರಿಗೆ ನೇರವಾಗಿ ಪ್ರಯೋಜನವಾಗುವುದರಿಂದ ಉದ್ಯೋಗಾಧಾರಿತ ತರಬೇತಿಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಪ್ರಾರಂಭಿಸಿರುವುದಾಗಿ ಸರ್ಕಾರದ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ ಇವರು ಸಭೆಯ ಗಮನಕ್ಕೆ ತಂದರು. ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ ಇಲಾಖೆ)

32. ಇಂಧನ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 1596.97 | 658.08 | 41 | 586.30 | 242.20 | 41 |

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಹಾಗೂ ಸೌಲಭ್ಯ ಪಡೆದಿರುವ ಫಲಾನುಭವಿಗಳ ವಿವರವನ್ನು ಸಮಾಜ ಕಲ್ಯಾಣ ಇಲಾಖೆಗೆ ಒದಗಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ)

33. ಕನ್ನಡ ಮತ್ತು ಸಂಸ್ಕೃತಿ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 20.42 | 1.09 | 5 | 8.73 | 0.30 | 3 |

Constituent assembly debate ಮತ್ತು ಡಾ||ಬಿ.ಆರ್.ಅಂಬೇಡ್ಕರ್ ಸಂಪುಟಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸುವ ಕಾರ್ಯಕ್ರಮದ ಬಗ್ಗೆ ಮಾನ್ಯ ಸಚಿವಾರದ ಶ್ರೀ ಜೆ.ಸಿ.ಮಾಧುಸ್ವಾಮಿ ಇವರು ಮಾತನಾಡಿ ಮುದ್ರಣ ಕಾರ್ಯಕ್ರಮಕ್ಕೆ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ ವೆಚ್ಚ ಭರಿಸುವ ಬಗ್ಗೆ ಪ್ರಶ್ನಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಎನ್.ಮಹೇಶ್ ಇವರು ಮಾತನಾಡಿ ಸದರಿ ಪುಸ್ತಕದ ಮುದ್ರಣವು ಪೂರ್ಣಗೊಂಡ ನಂತರ ಪುಸ್ತಕಗಳನ್ನು ಸಮಾಜ ಕಲ್ಯಾಣ ಇಲಾಖೆಯ ಎಲ್ಲಾ ವಸತಿ ಶಾಲೆಗಳು ಹಾಗೂ ವಿದ್ಯಾರ್ಥಿನಿಲಯಗಳ ಗ್ರಂಥಾಲಯಗಳಿಗೆ ಸರಬರಾಜು ಮಾಡಲು ತಿಳಿಸಿದರು.

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ)

34. ಯೋಜನಾ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 462.60 | 113.36 | 25 | 188.11 | 45.06 | 24 |

ಮಾನ ಮುಖ್ಯ ಮಂತ್ರಿಗಳು ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ಕಲ್ಯಾಣ ಕರ್ನಾಟಕ ಎಂದು ನಾಮಕಾರಣ ಮಾಡಿದ್ದು. ಈ ಪ್ರದೇಶದ ವ್ಯಾಪ್ತಿಗೆ ಒಳಪಡುವ ಎಲ್ಲಾ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದವರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಸಮರ್ಪಕವಾಗಿ ವಿನಿಯೋಗಿಸಿ ಶೇಕಡ 100 ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.

ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪೂರ್ಣ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಕಾರ್ಯಕ್ರಮಗಳ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ)

35. ಕಾನೂನು ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 0.45 | 0.00 | 0 | 0.20 | 0.00 | 0 |

ಸರ್ಕಾರದ ಪ್ರಧಾನ ಕಾರ್ಯದರ್ಶಿ. ಸಮಾಜ ಕಲ್ಯಾಣ ಇಲಾಖೆ ಇವರು ಮಾತನಾಡಿ ಪ್ರಸ್ತುತ ಕಾನೂನು ಪದವೀಧರರಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರತಿ ತಿಂಗಳಿಗೆ ರೂ.10000/-ದಂತೆ ಒಟ್ಟು 2 ವರ್ಷಗಳಿಗೆ ಸ್ಟೈಪೆಂಡ್ ನೀಡಲಾಗುತ್ತಿದೆ ತಿಳಿಸಿದರು.

ಲಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಮತ್ತು ಪುಸ್ತಕಗಳ ವಿತರಣೆಗೆ ಕಾನೂನು ಇಲಾಖೆಯಿಂದ ಕ್ರಮವಹಿಸಲಾಗುತ್ತಿದೆ ಎಂದು ಇಲಾಖಾ ಅಧಿಕಾರಿಗಳು ತಿಳಿಸಿದರು.

(ಕ್ರಮ: ಸರ್ಕಾರದ ಕಾರ್ಯದರ್ಶಿ, ಕಾನೂನು ಇಲಾಖೆ)

36. ಆರ್ಥಿಕ ಇಲಾಖೆ :-

(ರೂ.ಕೋಟಿಗಳಲ್ಲಿ)

| SCSP | | | TSP | | |
|---|---|---|---|---|---|
| ಹಂಚಿಕೆ | ಖರ್ಚು | ಶೇಕಡ | ಹಂಚಿಕೆ | ಖರ್ಚು | ಶೇಕಡ |
| 700.00 | 0.00 | 0 | 325.00 | 0.00 | 0 |

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಸಾಲಮನ್ನಾ ಯೋಜನೆ ಅಡಿ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳ ಸಂಖ್ಯೆಗನುಗುಣವಾಗಿ ಅನುದಾನ ವಿನಿಯೋಗಿಸಲಾಗುವುದೆಂದು ಹಾಗೂ ಅನುದಾನ ಉಳಿಕೆಯಾದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳಿಗೆ ಮರುಹಂಚಿಕೆ ಮಾಡುವುದಾಗಿ ತಿಳಿಸಿದರು.

**(ಕ್ರಮ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ)**

**37. ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ :-**

ಮಾನ್ಯ ಸದಸದ್ಯರಾದ ಶ್ರೀ.ಎನ್.ಮಹೇಶ್ ರವರು ಮಾತನಾಡುತ್ತಾ ಹಲವಾರು ವಿದ್ಯಾರ್ಥಿನಿಲಯಗಳಲ್ಲಿ ಮಂಜೂರಾತಿ ಸಂಖ್ಯೆಗಿಂತ ದಾಖಲಾತಿ ಸಂಖ್ಯೆ ಹೆಚ್ಚಾಗಿದ್ದು ಸದರಿ ವಿಷಯದ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮಾತನಾಡುತ್ತಾ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹೆಚ್ಚುವರಿ ಕೊಠಡಿಗಳು, ಸ್ನಾನಗೃಹಗಳು ಹಾಗೂ ಶೌಚಾಲಯಗಳನ್ನು ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

**(ಕ್ರಮ: ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ)**

ಸನ್ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ ವಿವಿಧ ಇಲಾಖೆಗಳು ಆಗಸ್ಟ್ 2019 ರ ಅಂತ್ಯಕ್ಕೆ ಸಾಧಿಸಿದ ಪ್ರಗತಿಯು ತೀರಾ ನಿರಾಶಾದಾಯಕವಾಗಿದ್ದು, ಡಿಸೆಂಬರ್ ಅಂತ್ಯಕ್ಕೆ ಹೆಚ್ಚಿನ ಪ್ರಗತಿ ಸಾಧಿಸಲು ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು. ಮುಂದಿನ ಅಧಿವೇಶನದಲ್ಲಿ ಸಹ ಈ ಬಗ್ಗೆ ಪ್ರಶ್ನೆಗಳು ಬರುವ ಸಾಧ್ಯತೆ ಇರುವುದರಿಂದ ಎಲ್ಲಾ ಅಧಿಕಾರಿಗಳು ಎಚ್ಚೆತ್ತುಕೊಂಡು ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸುವಂತೆ ಸ್ಪಷ್ಟ ಸೂಚನೆ ನೀಡಿದರು.

ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಸಚಿವರು ಈಗಾಗಲೇ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದು, ಸದರಿ ಸಭೆಯಲ್ಲಿ ಸೂಚಿಸಿರುವಂತೆ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು. ಯಾವುದೇ ಕಾರಣಕ್ಕೂ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನವನ್ನು ಇತರೆ ಯೋಜನೆಗಳಿಗೆ ಉಪಯೋಗಿಸಬಾರದು. ಅನುದಾನವು ವ್ಯಪಗತವಾಗದಂತೆ ಹೆಚ್ಚಿನ ಗಮನಹರಿಸಿ ಸಂಪೂರ್ಣ ಪ್ರಗತಿ ಸಾಧಿಸುವಂತೆ ಸಹ ಸೂಚಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು ಹಾಗೂ ಅಧ್ಯಕ್ಷರು,
ರಾಜ್ಯ ಅನುಸೂಚಿತ ಜಾತಿಗಳು/
ಅನುಸೂಚಿತ ಪಂಗಡಗಳ
ಅಭಿವೃದ್ಧಿ ಪರಿಷತ್ತು.